ಇಂದು ಕೊಪ್ಪಳ ವಿವಿ ಪ್ರಥಮ ಸಂಸ್ಥಾಪನಾ ದಿನಾಚರಣೆ

ಕೊಪ್ಪಳ, ಮಾರ್ಚ್ 18 : ಕೊಪ್ಪಳ ವಿಶ್ವ ವಿದ್ಯಾಲಯದ ಪ್ರಥಮ ಸಂಸ್ಥಾಪನಾ ದಿನಾಚರಣೆಯನ್ನು ಮಾರ್ಚ್ 19 ರಂದು ಬೆಳಿಗ್ಗೆ 10.30 ಗಂಟೆಗೆ ತಳಕಲ್‌ನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೊ.ಕೆ.ಎಮ್ ಮೈತ್ರಿ ಅವರು ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಗದಗ, ಶಿಗ್ಗಾಂವಿ, ಹಂಪಿ, ಬಾಗಲಕೋಟೆ, ಹಾವೇರಿ, ಬೀದರ, ಕೊಡಗು, ಹಾಸನ, ಚಾಮರಾಜ ನಗರ ವಿಶ್ವ ವಿದ್ಯಾಲಯಗಳ ಕುಲಪತಿಗಳು, ಬಳ್ಳಾರಿಯ ಶ್ರೀ ಕೃಷ್ಣದೇವರಾಯ ವಿವಿ ಕುಲಸಚಿವರಾದ ಎಸ್.ಎನ್.ರುದ್ರೇಶ, ತಳಕಲ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ವಿರೂಪಾಕ್ಷಿ ಬಾಗೋಡಿ ಅವರು ಭಾಗವಹಿಸುವರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಪ್ಪಳ ವಿವಿ ಕುಲತಿಗಳಾದ ಬಿ.ಕೆ.ರವಿ ಅವರು ವಹಿಸುವರು ಎಂದು ವಿಶ್ವ ವಿದ್ಯಾಲಯದ ಪ್ರಕಟಣೆ ತಿಳಿಸಿದೆ.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಪ್ಪಳ ವಿವಿ ಕುಲತಿಗಳಾದ ಬಿ.ಕೆ.ರವಿ ಅವರು ವಹಿಸುವರು ಎಂದು ವಿಶ್ವ ವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಬೇಸಿಗೆಯಲ್ಲಿ ಆರೋಗ್ಯ ರಕ್ಷಣೆಗೆ ಡಿಎಚ್‌ಓ ಅವರಿಂದ ಸಲಹೆಗಳು

ಕೊಪ್ಪಳ, ಮಾರ್ಚ್ 18 : ಜಿಲ್ಲೆಯಾದ್ಯಂತ ಪ್ರಸ್ತುತ ತಿಂಗಳಿಂದ ಬಿಸಿಲಿನ ಪ್ರಖರತೆ ಮತ್ತು ತೀವ್ರತೆ ಕಂಡುಬಂದ ಹಿನ್ನೆಲೆಯಲ್ಲಿ ಸಾರ್ವಜನಕರು, ಗರ್ಭಿಣಿಯರು, ಬಾಣಂತಿಯರು ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ॥ ಲಿಂಗರಾಜು ಟಿ. ಅವರು ಸಲಹೆ ನೀಡಿದ್ದಾರೆ.

ಬೇಸಿಗೆ ಸಮಯದಲ್ಲಿ ಹೆಚ್ಚು ನೀರನ್ನು ಕುಡಿಯಬೇಕು. ಮಜ್ಜಿಗೆ/ ಎಳನೀರು, ಹಣ್ಣಿನ ರಸವನ್ನು ಹೆಚ್ಚಾಗಿ ಸೇವಿಸಬೇಕು. ನೀರಿನ ಅಂಶ ಹೆಚ್ಚಾಗಿರುವ ತರಕಾರಿಗಳು/ಹಣ್ಣುಗಳನ್ನು ಸೇವಿಸುವುದು ಉತ್ತಮ. ಸಡಿಲವಾದ ತೆಳು ಬಣ್ಣದ ಹತ್ತಿಯ ಬಟ್ಟೆಯನ್ನು ಧರಿಸಿರಿ, ಗಾಳಿಯಾಡುವ ಪಾದರಕ್ಷೆ ಧರಿಸಿರಿ. ಹೊರಗಡೆ ತೆರಳುವ ವೇಳೆ ತಂಪು ಕನ್ನಡಕ, ಛತ್ರಿ, ಟವೆಲ್ ಅಥವಾ ಬಿಸಿಲಿನಿಂದ ಕಾಪಾಡಿಕೊಳ್ಳುವ ಸಾಮಾನ್ಯ ಕ್ರಮಗಳನ್ನು ಪಾಲಿಸಿ. ರೇಡಿಯೊ, ದೂರದರ್ಶನ ಹಾಗೂ ದಿನಪತ್ರಿಕೆಗಳಲ್ಲಿ ಬಿಸಿಯಾದ ಗಾಳಿ/ಶಾಖ ತರಂಗ (ಹೀಟ್ ವೇವ್)ದ ಬಗ್ಗೆ ನೀಡುವ ಮಾಹಿತಿ ಅನುಸಾರ ದೈನಂದಿನ ಚಟುವಟಿಕೆಗಳನ್ನು ಯೋಜಿಸಿಕೊಳ್ಳಿ. ಬಿಸಿಲಿನಲ್ಲಿ ಹೊರಗಡೆ ಕಾರ್ಯನರ್ವಹಿಸುವವರು (ಜಮೀನು ಕೆಲಸ, ರಸ್ತೆ ಕಾಮಗಾರಿ ಮುಂತಾದವು) ಆದಷ್ಟು ಬೆಳಗ್ಗೆ 11 ಗಂಟೆಯ ಒಳಗೆ ಮತ್ತು ಸಂಜೆ 4 ಗಂಟೆ ನಂತರ ಕೈಗೊಳ್ಳುವುದು ಉತ್ತಮ.

ಬಿಸಿಲಿನ ಅವಧಿಯಲ್ಲಿ ಶ್ರಮದಾಯಕ ಕೆಲಸಗಳಿಂದ ವಿಶ್ರಾಂತಿ ಪಡೆಯಿರಿ. ಬಿಸಿಲಿನಲ್ಲಿ ನಡೆಯುವಾಗ ಕಡ್ಡಾಯವಾಗಿ ಚಪ್ಪಲಿ ಧರಿಸಿ. ಟೀ/ಕಾಫಿ, ಹೆಚ್ಚು ಸಕ್ಕರೆ ಅಂಶವನ್ನು ಹೊಂದಿರುವ ಕಾರ್ಬೋನೇಟೆಡ್ ಪಾನೀಯ ಹಾಗೂ ಮದ್ಯಪಾನದಿಂದ ದೂರವಿರಿ. ವ್ಯಕ್ತಿ ತೊದಲು ಮಾತು ಅಥವಾ ಅರ್ಥ ರಹಿತವಾಗಿ ಬಡಬಡಿಸಿದಲ್ಲಿ ಕೂಡಲೇ ನೆರಳಿನ ಸ್ಥಳಕ್ಕೆ ಸ್ಥಳಾಂತರಿಸಿ. ಕೆಳಗೆ ಮಲಗಿಸಿ ಕಾಲುಗಳನ್ನು ಮೇಲಕ್ಕೆ ಎತ್ತಿ ವಿಶ್ರಾಂತಿ ಪಡೆಯಲು ಸಹಾಯ ಮಾಡಿ. ಬಿಸಿಗಾಳಿ ಮತ್ತು ಅತಿಯಾದ ತಾಪಮಾನದಿಂದ ಆರೋಗ್ಯ ಸಮಸ್ಯೆಗಳು ಉಂಟಾದಲ್ಲಿ ಸಮೀಪದ ಆರೋಗ್ಯ ಕೇಂದ್ರವನ್ನು ಸಂಪರ್ಕಿಸಿ ಅಥವಾ 108/102 ಕ್ಕೆ ಕರೆ ಮಾಡಿ ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗದಗ ಬೆಟಗೇರಿ ನಗರದ ನೀರು ಪೂರೈಕೆ ಮಾಡುವ ವಿವರ

ಗದಗ ಮಾರ್ಚ 18: ಗದಗ ಬೆಟಗೇರಿ ಅವಳಿ ನಗರದ ಸಾರ್ವಜನಕರಿಗೆ ತಿಳಿಸುವುದೆನೆಂದರೆ ಮಾರ್ಚ 19 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂಬರ್7,6,10ರಲ್ಲಿ ಪಂಚಲಕ್ಷ್ಮೀ ಬಡಾವಣೆ, ಭಾಗ–1,2,3,4 ಭಜಂತ್ರಿಓಣಿ, ಅಂಬೇಡ್ಕರ ನಗರ ಹರಿಜನಕೇರಿ, ಕುಲಕರ್ಣಿಗಲ್ಲಿ, ದಿಬ್ಬದ ಲೈನ್, ವಾರ್ಡ ನಂ 26ರಲ್ಲಿ ಕಾಶಿವಿಶ್ವನಾಥನಗರ, ಅಸೂಟಿಯವರ ಲೈನ್, ಹನಮಂತದೇವರಗುಡಿ ಲೈನ್, ದುರ್ಗಮ್ಮನಗುಡಿ ಲೈನ್, ಕಣವಿಯವರ ಲೈನ್, ವಾರ್ಡ ನಂ 33ರಲ್ಲಿ ಮುಳಗುಂದ ರೋಡ್, ಕೇಶವನಗರ ಹುಬ್ಬಳ್ಳಿರಸ್ತೆ, ಬ್ಯಾಂಕರ್ಸ್ ಕಾಲನಿಯ ಲೈನ್, ವೀರೇಶ್ವರನಗರ, ಕೇಶವನಗರಜಾಕೇರ ಹುಸೇನ ಕಾಲನಿಯ ಲೈನ್.,

ತುಂಗಭದ್ರಾ ನದಿಯಿಂದ ಪೂರೈಕೆ ಮಾಡಿದ ನೀರನ್ನುಕಡ್ಡಾಯವಾಗಿ ಕಾಯಿಸಿ ಆರಿಸಿ ಕುಡಿಯಲು ಉಪಯೋಗಿಸತಕ್ಕದ್ದು ಎಂದು ಈ ಮೂಲಕ ಗದಗ–ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ತುಂಗಭದ್ರಾ ನದಿಯಿಂದ ಪೂರೈಕೆ ಮಾಡಿದ ನೀರನ್ನುಕಡ್ಡಾಯವಾಗಿ ಕಾಯಿಸಿ ಆರಿಸಿ ಕುಡಿಯಲು ಉಪಯೋಗಿಸತಕ್ಕದ್ದು ಎಂದು ಈ ಮೂಲಕ ಗದಗ–ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಚಿವರಿಂದ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ

ಯಮಕನಮರಡಿ : ಸತೀಶ ಜಾರಕಿಹೊಳಲಿಯವರ ಯಮಕನಮರಡಿ ಮತಕ್ಷೇತ್ರದ ಶಾಸಕರಾದ ನಂತರ ಹಲವಾರು ಜನಪರ ಯೋಜನೆಗಳು ಮಂಜೂರು ಮಾಡಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಾರೆ ಎಂದು ಯುವ ದುರೀಣ ಕಿರಣಸಿಂಗ ರಜಪೂತ ಹೇಳಿದರು. ಅವರು ಶನಿವಾರ ದಿ 16 ಯಮಕನಮರಡಿಯಲ್ಲಿ ಸರಕಾರಿ ಉರ್ದು ಪ್ರಾಥಮಿಕ ಶಾಲೆಯಲ್ಲಿ ನಡೆದ ವಿವೇಕ ಯೋಜನೆಯಡಿಯಲ್ಲಿ ಮಂಜೂರಾದ 45 ಲಕ್ಷ ರೂ.ಗಳ ವೆಚ್ಚದಲ್ಲಿ ಮೂರು ಶಾಲಾ ಕೊಠಡಿಗಳ ನರ್ಮಾಣ ಕಾಮಗಾರಿಗೆ ಚಾಲನೆ ಮತ್ತು ವಿವೇಕ ಯೋಜನೆಯಡಿಯಲ್ಲಿ 60 ಲಕ್ಷ ರೂ.ಗಳ ವೆಚ್ಚದಲ್ಲಿ ನರ್ಮಿಸಲಾದ ನಾಲ್ಕು ಶಾಲಾ ಕೊಠಡಿಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಚಿವ ಸತೀಶ ಜಾರಕಿಹೊಳಿಯವರು ಶಿಕ್ಷಣಕ್ಕೆ ಹೆಚ್ಚಿನ ಅಧ್ಯತೆ ನೀಡುತ್ತಿದ್ದು ಲೋಕೋಪಯೋಗಿ ಇಲಾಖೆ ಯೋಜನೆಯಡಿಯಲ್ಲಿ 48 ಶಾಲಾ ಕೊಠಡಿಗಳು ಮಂಜೂರು ಮಾಡಿಸಿದ್ದು, ಕೆಲಸವು ಪ್ರಗತಿಯಲ್ಲಿ ಸಾಗಿದೆ. ಇದ್ದು ರಾಜ್ಯದಲ್ಲಿ ಶಿಕ್ಷಣಕ್ಕಾಗಿ ಮಾಡಿದ್ದು, ಸಾಧನೆಯಾಗಿದೆ ಎಂದರು. ಯಮಕನಮರಡಿ ಗ್ರಾ.ಪಂ. ಅಧ್ಯಕ್ಷ ಆಸ್ಮಾ ಫನಬಂದ ತಮ್ಮ ಸ್ವಂತ ಖರ್ಚಿನಂದ ವಿದ್ಯಾರ್ಥಿಗಳಿಗೆ 100 ತಾಟುಗಳು 100 ಗ್ಲಾಸಗಳು ವಿತರಿಸಿದರು. ಈ ವೇಳೆಯಲ್ಲಿ ವೀರಣ್ಣಾ ಬಿಸಿರೊಟ್ಟಿ, ಗಿರೀಶ ಮಿಶ್ರಿಕೋಟಿ, ಶರೀಪ ಬೇಪಾರಿ, ಶೌಕತ ಖಾಜಿ. ಅಸಲಾಮ ಫಕಾಲಿ ಎಸ್.ಡಿ.ಎಮ್.ಸಿ. ಅಧ್ಯಕ್ಷ ಮಾಣಿಕಸಾಬ ಬೇಪಾರಿ ನವೃತ್ತ ಮುಖ್ಯ ಶಿಕ್ಷಕ ಆಯ್.ಆರ್. ನಾಲಬಂದ, ರಹೀಮ ಪಟೇಲ, ಎಸ್.ಡಿ.ಎಂ.ಸಿ. ಸದಸ್ಯರು ಮುಖ್ಯ ಶಿಕ್ಷಕ ಪುರಕನ ಘೋರಿ ಸ್ವಾಗತಿಸಿ ಕಾರ್ಯಕ್ರಮ ನರೂಪಿಸಿದರು.

ಗುರುವಂದನ ಮತ್ತು ಸ್ನೇಹ ಸಮ್ಮೇಳನ ಕಾರ್ಯಕ್ರಮದ ಪೂರ್ವಭಾವಿ ಸಭೆ

ಕಾರಟಗಿ : ಸರಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜ್ ನ 1995 – 96ನೇ ಸಾಲಿನ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಂದ ಗುರುವಂದನ ಮತ್ತು ಸ್ನೇಹ ಸಮ್ಮೇಳನ ಕಾರ್ಯಕ್ರಮದ ಪೂರ್ವಭಾವಿ ಸಭೆ ಆಯೋಜಿಸಲಾಗಿತ್ತು ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ವಿದ್ಯಾರ್ಥಿ ವಿದ್ಯಾರ್ಥಿನಯರು ಭಾಗವಹಿಸಿ ಅನಿಸಿಕೆ ಅಭಿಪ್ರಾಯಗಳನ್ನು ಹಂಚಿಕೊಂಡರು ನಂತರ ಮಾತನಾಡಿದ ಎಂ ಸಿದ್ದಯ್ಯ ಸ್ವಾಮಿ ಮತ್ತು ವಿಶಾಲಾಕ್ಷಿ ನಮಗೆ ಮಾರ್ಗದರ್ಶನ ನೀಡಿ ಬದುಕನ್ನು ರೂಪಿಸಿರುವಂತ ಗುರುಗಳನ್ನು ನೆನೆದು ವಂದಿಸುವುದು ನಮ್ಮೆಲ್ಲರ ಕರ್ತವ್ಯ ಅಲ್ಲದೆ 20 ವರ್ಷಗಳಿಂದ ಎಲ್ಲೆಲ್ಲೂ ಇರುವಂತ ಗೆಳೆಯರೆಲ್ಲ ಒಂದುಗೂಡುವ ಸಮಯ ಸಂದರ್ಭ ಇದಾಗಿದೆ ಅಲ್ಲದೆ ನನ್ನ ಮಗಳ ಮದುವೆ ಮೇ 5 ರಂದು ನಡೆಯಲಿದ್ದು ಎಲ್ಲರೂ ಬಂದು ನನ್ನ ಮಗಳಿಗೆ ಆಶೀರ್ವದಿಸಬೇಕಾಗಿ ವಿನಂತಿಸಿಕೊಂಡರು . ಬರುವ ಜೂನ್ ತಿಂಗಳ 9ರಂದು ಕಾರ್ಯಕ್ರಮ ನಡೆಸಲಾಗುವುದು ಎಲ್ಲಾ ಗೆಳೆಯರು ಬಂದು ತನು ಮನದಿಂದ ಸಹಕರಿಸುವಂತೆ ಸಾಗರ ಅಭಿಪ್ರಾಯ ಹಂಚಿಕೊಂಡರು

ಈ ಸಂದರ್ಭದಲ್ಲಿ 1995 96ನೇ ಸಾಲಿನ ವಿದ್ಯಾರ್ಥಿ ವಿದ್ಯಾರ್ಥಿನಯರು ಉಪಸದರಿದ್ದರು

ಗದಗ ಐಎಂಎದಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ
ಮಹಿಳೆಯರು ಎಲ್ಲ ಕ್ಷೇತ್ರದಲ್ಲೂ ಮುನ್ನಡೆ ಸಾಧಿಸಿದ್ದಾರೆ : ಡಾ.ಬಳ್ಳಾರಿ

ಗದಗ, ಮಾ. 18 : ಪ್ರಗತಿಪರ ಇಂದಿನ ಆಧುನಕ ದಿನಗಳಲ್ಲಿ ಮಹಿಳೆಯರಲ್ಲಿ ಸ್ಪರ್ಧಾ ಮನೋಭಾವ, ಶಿಕ್ಷಣ ಪಾಂಡಿತ್ಯದಿಂದಾಗಿ ಮಹಿಳೆ ಇಂದು ಎಲ್ಲ ಕ್ಷೇತ್ರದಲ್ಲೂ ಗಟ್ಟಿ ನೆಲೆ ಕಂಡುಕೊಳ್ಳಲು ಸಾಧ್ಯವಾಗಿದೆ ಎಂದು ರಾಜ್ಯ ಐಎಂಎ ನಕಟಪೂರ್ವ ಅಧ್ಯಕ್ಷ ಗದುಗಿನ ತಜ್ಞ ವೈದ್ಯ ಡಾ.ರಾಜಶೇಖರ ಬಳ್ಳಾರಿ ಅಭಿಪ್ರಾಯಪಟ್ಟರು.

ಅವರು ಗದಗ ಐಎಂಎ ಸಭಾಂಗಣದಲ್ಲಿ ಭಾರತೀಯ ವೈದ್ಯಕೀಯ ಸಂಘ ಗದಗ ಶಾಖೆ ಏರ್ಪಡಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಮಹಿಳೆಯರ ಸ್ಥಾನಮಾನ ಉತ್ತಮಪಡಿಸುವಿಕೆ, ಸಾಮಾಜಿಕ ಬೆಳವಣಿಗೆಗೆ ಅಗತ್ಯತೆಯ ಸಮಾನತೆ ಕಲ್ಪಿಸುವ ಇಂದಿನ ಅಗತ್ಯತೆಯಾಗಿದೆ.

ಕೌಟುಂಬಿಕ ಹಾಗೂ ಸಾಮಾಜಿಕ ಹಲವಾರು ಕಟ್ಟುಪಾಡುಗಳ ಮಧ್ಯದಲ್ಲಿಯೂ ಶೈಕ್ಷಣಿಕ ಅರ್ಹತೆ, ಪರಿಣಿತಿಯನ್ನು ಹೊಂದುವ ಮೂಲಕ ಮಹಿಳೆ ದಿಟ್ಟತನದ ಹೆಜ್ಜೆಯನ್ನಿಟ್ಟು ಮುನ್ನಡೆ ಸಾಧಿಸುತ್ತಿರುವದು ಶ್ಲಾಘನೀಯ ಎಂದರು. ಕುಟುಂಬದಲ್ಲಿ ಪಾಲಕ ಪೋಷಕರು, ಪತಿಯ ಮನೆಯಿಂದ ಸಮಾನತೆಯೊಂದಿಗೆ ಸಹಕಾರ, ಪ್ರೋತ್ಸಾಹ ದೊರೆತಾಗ ಅವಳಿಗೆ ಪೂರ್ಣ ಪ್ರಮಾಣದ ಸ್ವಾತಂತ್ರ್ಯ ಕೊಟ್ಟಾಗ ಮಾತ್ರ ಮಹಿಳೆಯ ಸಾಧನೆಯ ಛಲದ ಬದುಕು ಸುಗಮವಾಗಲು ಸಾಧ್ಯ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಭಾರತೀಯ ವೈದ್ಯಕೀಯ ಸಂಘ ಗದಗ ಶಾಖೆಯ ಅಧ್ಯಕ್ಷ ಜಿ.ಎಸ್.ಪಲ್ಲೇದ ಅವರು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿನದಂದು ಮಾತ್ರ ಮಹಿಳೆಯರು ಮತ್ತು ಮಹಿಳೆಯರ ಸ್ಥಾನ–ಮಾನದ ಬಗ್ಗೆ ಮಾತನಾಡುವ ಬದಲು ನತ್ಯದ ಬದುಕಿನಲ್ಲಿ ಮಹಿಳಾ ಅಭಿವೃದ್ಧಿಗೆ ಪೂರಕವಾಗಿ ಕಾರ್ಯ ನಡೆಯುವಂತಾಗಬೇಕು ಅಂದಾಗ ಮಾತ್ರ ದಿನಾಚರಣೆಗೆ ನಜವಾದ ಅರ್ಥ ಬಂದೀತು ಎಂದರು.

ಸಮಾರಂಭದಲ್ಲಿ ವಿವಿದ ಕ್ಷೇತ್ರದಲ್ಲಿ ಗಣನೀಯ ಸಾಧನೆಗೈದ 30 ಸಾಧಕ ಮಹಿಳೆಯರಿಗೆ ಉಡುಗೋರೆಯೊಂದಿಗೆ ಸನ್ಮಾನಸಿ ಗೌರವಿಸಲಾಯಿತು. ಆರ್ಥಿಕವಾಗಿ ಹಿಂದುಳಿದ ಸುಮಾರು 150 ಕ್ಕೂ ಹೆಚ್ಚಿನ ವಿದ್ಯಾರ್ಥಿ ವಿದ್ಯಾರ್ಥಿನಯರಿಗೆ ಸುಮಾರು 40 ಸಾವಿರ ರೂ. ಮೌಲ್ಯದ ನಂಬರಿನ ಕನ್ನಡಗಳನ್ನು ಉಡುಗೋರೆಯಾಗಿ ನೀಡಲಾಯಿತು. ವೇದಿಕೆಯ ಮೇಲೆ ಗದಗ ಐಎಂಎ ಮಾಜಿ ಅಧ್ಯಕ್ಷ ಡಾ.ಪ್ಯಾರಅಲಿ ನೂರಾನ ಉಪಸ್ಥಿತರಿದ್ದರು.

ಡಾ.ಜಿ.ಎಸ್.ಪಲ್ಲೇದ ಸ್ವಾಗತಿಸಿದರು, ಐಎಂಎ ಕಾರ್ಯದರ್ಶಿ ಡಾ.ಚಂದ್ರಶೇಖರ ಬಳ್ಳಾರಿ ನರೂಪಿಸಿದರು, ಐಎಂಎ ಮಹಿಳಾ ಘಟಕದ ಕಾರ್ಯದರ್ಶಿ ಡಾ.ರಾಧಿಕಾ ಬಳ್ಳಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು ಕೊನೆಗೆ ಮಹಿಳಾ ಘಟಕದ ಅಧ್ಯಕ್ಷೆ ಡಾ.ಸೋನಿಯಾ ಕರೂರ ವಂದಿಸಿದರು.

ಸಮಾರಂಭದಲ್ಲಿ ಡಾ.ಬಸವರಾಜ ಆಲೂರ, ಡಾ.ಶೇಖರ ಸಜ್ಜನರ, ಡಾ.ವ್ಹಿ.ಎಸ್.ಹೊಸಮಠ, ಡಾ.ಜಿ.ಬಿ.ಬಿಡಿನಹಾಳ, ಡಾ.ಅನುಪಮಾ ಪಾಟೀಲ, ಡಾ.ಸುನೀತಾ ಕುರಡಗಿ, ಶೈನಾಜಬೇಗಂ ಮಹ್ಮದಗೌಸ್ ನೆಗಳೂರ ಸೇರಿದಂತೆ ಮುಂತಾದವರಿದ್ದರು.

ಮಾದರಿ ನೀತಿ ಸಂಹಿತೆ ಜಾರಿ: ರಾಜಕೀಯ ಸಭೆ, ಸಮಾರಂಭ, ಕಾರ್ಯಕ್ರಮಗಳಿಗೆ ಪೂರ್ವಾನುಮತಿ ಕಡ್ಡಾಯ

ಬೆಳಗಾವಿ, ಮಾ.: ಬೆಳಗಾವಿ–02 ಲೋಕಸಭಾ ಚುನಾವಣೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಬೆಳಗಾವಿ ಉತ್ತರ–11 ಹಾಗೂ ಬೆಳಗಾವಿ ದಕ್ಷಿಣ–12 ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಯಾವುದೇ ರಾಜಕೀಯ ಸಭೆ, ಸಮಾರಂಭ ಹಾಗೂ ಕಾರ್ಯಕ್ರಮಗಳನ್ನು ಆಯೋಜಿಸಬೇಕಾದಲ್ಲಿ ಪೂರ್ವಾನುಮತಿಯನ್ನು ಪಡೆಯಬೇಕಾಗಿರುವುದು ಕಡ್ಡಾಯವಾಗಿರುತ್ತದೆ.ಮಾರ್ಚ್ 16, 2024 ರಿಂದ ಮಾದರಿ ನೀತಿ ಸಂಹಿತೆ ಜಾರಿಯಾಗಿದ್ದು, ಯಾವುದೇ ಕಾರ್ಯಕ್ರಮವನ್ನು ಆಯೋಜಿಸಬೇಕಾದಲ್ಲಿ "SUVIDHA" ವೆಬ್‌ಸೈಟಿನಲ್ಲಿ 48 ಗಂಟೆಯೊಳಗೆ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸುವಂತೆ ನರ್ದೇಶನ ನೀಡಲಾಗಿರುತ್ತದೆ. ಚುನಾವಣೆ ಹಿನ್ನೆಲೆಯಲ್ಲಿ ರಾಜಕೀಯಕ್ಕೆ ಸಂಬಂಧಪಟ್ಟಂತೆ ಯಾವುದೇ ಕಾರ್ಯಕ್ರಮ ಆಯೋಜಿಸುವ 48 ಗಂಟೆಗಳ ಪೂರ್ವದಲ್ಲಿ ಕಾರ್ಯಕ್ರಮದ ಅನುಮತಿ ಕೋರಿ ಸುವಿಧಾ ವೆಬ್ ಸೈಟ್ https://suvidha.eci.gov.in/pc/public/login ಮುಖಾಂತರ ಅರ್ಜಿಗಳನ್ನು ಸಲ್ಲಿಸಬೇಕು ಎಂದು ಬೆಳಗಾವಿ–02 ಲೋಕಸಭಾ ಚುನಾವಣೆ ಕ್ಷೇತ್ರ, ಬೆಳಗಾವಿ–11 ಉತ್ತರ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಮಹಿಳಾ ದಿನಾಚರಣೆ ಕಾರ್ಯಕ್ರಮ

ಬೆಳಗಾವಿ 18: ಕನ್ನಡ ಸಾಹಿತ್ಯ ಪರಿಷತ್ತು ಬೆಳಗಾವಿ ಜಿಲ್ಲೆ, ಕನ್ನಡ ಸಾಂಸ್ಕೃತಿಕ ಭವನದ ಕ್ಷೇಮಾಭಿವೃದ್ಧಿ ಸಂಘ, ಲಿಂಗಾಯತ ಮಹಿಳಾ ಸಮಾಜ ಬೆಳಗಾವಿ, ಬೆಳಗಾವಿ ಜಿಲ್ಲಾ ಲೇಖಕಿಯರ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ, ಮಹಿಳಾ ದಿನಾಚರಣೆ ಕಾರ್ಯಕ್ರಮವು ಮಂಗಳವಾರ ದಿ:19/03/2024 ರಂದು, ಮಧ್ಯಾನ:3:30 ಕ್ಕೆ, ಕನ್ನಡ ಭವನ ನೆಹರುನಗರ ಬೆಳಗಾವಿಯಲ್ಲಿ ನಡೆಯಲಿದೆ. ಮುಕ್ತಾಂಬ ಬಸವರಾಜ ಪ್ರಧಾನ ಕಾರ್ಯದರ್ಶಿ ರಾಜ್ಯ ಮಹಿಳಾ ಘಟಕ ಸ.ಭಾ.ವೀ.ಮಹಾಸಭೆ ಬೆಂಗಳೂರು ಇವರು ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಲಿದ್ದಾರೆ. ಬೆಳಗಾವಿ ಜಿಲ್ಲಾ ಕಸಾಪ ಅಧ್ಯಕ್ಷರು, ಮಂಗಲಾ ಮೆಟಗುಡ್ಡ ಅವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ವಿಶ್ವೇಶ್ವರಿ ಹಿರೇಮಠ ರಂಗ ನರ್ದೇಶಕಿ ಧಾರವಾಡ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ವಿನೀತಾ ಗೆಜ್ಜಿ ಇ.ಸಿ. ಇವರು ಶತಮಾನಕಂಡ ಮಹಿಳಾ ಸಾಹಿತಿ ದಿ.ಶ್ರೀಮತಿ. ಸುಶೀಲಾಬಾಯಿ ಜ ಕುಲಕರ್ಣಿ ಅವರ ಬದುಕು ಬರಹ ಕುರಿತು ಉಪನ್ಯಾಸ ನೀಡಲಿದ್ದಾರೆ. ಮಹಿಳಾ ಸಾಹಿತಿಗಳಾದ ಶಾಂತಾದೇವಿ ಹುಲೆಪ್ಪನವರ ಮಠ, ರಾಧಿಕಾ ಮಿರಜಿ, ಪಾರ್ವತಿ, ನೀಲಂ ಗುತ್ತಿಗೋಳಿ, ದಾನಮ್ಮ ಹಿಡ್‌ದುಗ್ಗಿ,ಜೋತ್ಸ ನಾ ಪೈ, ಜಯಶ್ರೀ ಬಂಡಿವಡ್ಡರ, ಸುರೇಖಾ ಪಾಟೀಲ, ಸುನೀತಾ ಸರ್ವದೆ ಇವರು ಗಳನ್ನು ಸನ್ಮಾನಸಲಾಗುವುದು. ಶೈಲಜಾ ಭಿಂಗೆ ಸಂಸ್ಥಾಪಕರು ಮಹಿಳಾ ಲಿಂಗಾಯತ ಸಮಾಜ. ಆಶಾ ಕಡಪಟ್ಟಿ ಸಾಹಿತಿಗಳು ಬೆಳಗಾವಿ ಗೌರವ ಉಪಸ್ಥಿತಿಯ ಲ್ಲಿರುವರು. ಕ.ಸಾ.ಪ. ಬೆಳಗಾವಿ ಜಿಲ್ಲೆಯ ಎಲ್ಲ ತಾಲೂಕಾ ಅಧ್ಯಕ್ಷರು ಗಳು, ಹಾಗೂ ಜಿಲ್ಲಾ ಕ.ಸಾ.ಪ. ಕಾರ್ಯಕಾರಿ ಸ